# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ: 03.07.2021ರಂದು ಪೂರ್ವಾಹ್ನ 11.30 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ನಡೆದ ವ್ಯವಸ್ಥಾಪನಾ ಮಂಡಳಿಯ **165ನೇ** ಸಾಮಾನ್ಯ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಡಾ. ವಿದ್ಯಾಶಂಕರ್.ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ. ಆರ್. ರಾಜಣ್ಣ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| **ಶ್ರೀ ಎಸ್. ನಾಗರಾಜ್,**<br>ವಿಧಾನ ಪರಿಷತ್ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಕರಾಮುವಿ, ಮೈಸೂರು. | **ಶ್ರೀ ಎನ್. ಅಪ್ಪಾಜಿಗೌಡ**<br>ಶಾಸಕರು, ವಿಧಾನ ಪರಿಷತ್ ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.162/49, "ನೈದಿಲೆ", 6ನೇ ಅಡ್ಡ ರಸ್ತೆ,<br>ಬಾಪೂಜಿ ಬಡಾವಣೆ, ಚಂದ್ರ ಲೇಔಟ್,<br>ವಿಜಯನಗರ, ಬೆಂಗಳೂರು-560 040 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು | **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 |
| **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 | **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 |
| **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ, ಮೈಸೂರು – 570 023 | **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 |
| **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ, ಮೈಸೂರು – 570 004 | -- |

ಕುಲಪತಿಗಳು                ಕುಲಸಚಿವರು

| ಅನುಪಸ್ಥಿತರು | |
|---|---|
| ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. ೭೮, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 | **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ<br>ಮಂಗಳ ಗಂಗೋತ್ರಿ, ಮಂಗಳೂರು – 574 199 |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ನಂತರ, ಮಾನ್ಯ ಕುಲಪತಿಗಳು ಮಾತನಾಡಿ ವಿಶ್ವವಿದ್ಯಾನಿಲಯಕ್ಕೆ ಈ ಹಿಂದಿನ ಅವಧಿಯಲ್ಲಿ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಿದ್ದ ಪ್ರೊ. ಲಿಂಗರಾಜಗಾಂಧಿ ಅವರ ಸೇವೆಯನ್ನು ಸ್ಮರಿಸಿದರು ಹಾಗೂ ಅವರ ಸ್ಥಾನಕ್ಕೆ ಕುಲಸಚಿವರಾಗಿ ಹೊಸದಾಗಿ ನೇಮಕಗೊಂಡ ಪ್ರೊ. ಆರ್. ರಾಜಣ್ಣ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರನ್ನು ಸದಸ್ಯರುಗಳಿಗೆ ಪರಿಚಯಿಸಿ, ನೂತನ ಕುಲಸಚಿವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಕುಲಸಚಿವರು ಮಾತನಾಡಿ, ಘನತೆವೆತ್ತ ಕುಲಾಧಿಪತಿಗಳು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರುಗಳು ನನ್ನನ್ನು ಮುಕ್ತ ವಿಶ್ವವಿದ್ಯಾನಿಲಯಕ್ಕೆ ಕುಲಸಚಿವ ಹುದ್ದೆಗೆ ಆಯ್ಕೆ ಮಾಡಿರುವುದಕ್ಕೆ ನಾನು ಆಭಾರಿಯಾಗಿದ್ದೇನೆಂದು ತಿಳಿಸಿ, ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ವಿಶ್ವವಿದ್ಯಾನಿಲಯದ ಪ್ರಗತಿಗೆ ಶಕ್ತಿ ಮೀರಿ ಶ್ರಮಿಸುವುದಾಗಿ, ಇದಕ್ಕಾಗಿ ಮಾನ್ಯ ಸದಸ್ಯರುಗಳ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ನೀಡುವಂತೆ ಕೋರಿದರು.

ಆನಂತರ, ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದಲ್ಲಿ ಕೋವಿಡ್-19 ರ ಕಾಯಿಲೆಯಿಂದ ಮರಣ ಹೊಂದಿದ ವಿ.ವಿ.ನಿಲಯದ ಸಿಬ್ಬಂದಿಗಳ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಇತ್ತೀಚೆಗೆ ನಿಧನರಾದ ವಿ.ವಿ. ಸಿಬ್ಬಂದಿಗಳ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷಗಳ ಕಾಲ ಮೌನ ಆಚರಿಸುವಂತೆ ಸಭೆಯಲ್ಲಿ ಕೋರಿದರು. ಮಾನ್ಯ ಕುಲಪತಿಗಳು ಹಾಗೂ ಎಲ್ಲ ಸಭಾ ಸದಸ್ಯರುಗಳು ಮೃತ ಸಿಬ್ಬಂದಿಗಳ ಸ್ಮರಣಾರ್ಥ ಮೌನ ಆಚರಿಸಿ, ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ನಂತರ, ಅಧ್ಯಕ್ಷರು ವಿಷಯಸೂಚಿ ಪ್ರಕಾರ 164ನೇ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಆರಂಭಿಸಿದರು.

<u>ವಿಷಯ ಸಂಖ್ಯೆ : 165.01</u>

ಅ) ದಿನಾಂಕ: 06.03.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 06.03.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.

**ಅ) ದಿನಾಂಕ: 06.03.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

ಕುಲಪತಿಗಳು



ಕುಲಸಚಿವರು

ಆ) ದಿನಾಂಕ: 06.03.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 164ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಸಭೆಯು ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ : 165.02</u>

<u>ವಿಷಯ</u> : ವಿ.ವಿ.ನಿಲಯದ ಮುಕ್ತಗಂಗೋತ್ರಿ ಆವರಣದಲ್ಲಿನ ಪುರುಷರ ವಿದ್ಯಾರ್ಥಿನಿಲಯವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆ, ಮೈಸೂರು ಇವರಿಗೆ ಒಂದು ವರ್ಷದ ಅವಧಿಗೆ ನೀಡಲು ಬಾಡಿಗೆಯನ್ನು ನಿಗದಿಪಡಿಸುವ ಬಗ್ಗೆ.

* * * * *

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆ, ಮೈಸೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಯು.ಜಿ. ಪುರುಷರ ವಿದ್ಯಾರ್ಥಿನಿಲಯವು ಸುಮಾರು 58 ವರ್ಷಗಳ ಹಳೆಯ ಕಟ್ಟಡವಾಗಿದ್ದು ಪದೇ ಪದೇ ದುರಸ್ತಿಗೆ ಒಳಪಡುತ್ತಿರುತ್ತದೆ ಸದರಿ ದುರಸ್ತಿ ಕಾರ್ಯವನ್ನು ಪೂರ್ಣಗೊಳಿಸಲು ಸುಮಾರು 01 ವರ್ಷಗಳ ಕಾಲಾವಕಾಶವಾಗುವುದರಿಂದ ನಮ್ಮ ಸಂಸ್ಥೆಯ 75 ರಿಂದ 80 ವಿದ್ಯಾರ್ಥಿಗಳಿಗೆ ದಿ: 31.01.2021 ರಿಂದ ಒಂದು ವರ್ಷಗಳ ಅವಧಿಗೆ ವಿವಿನಿಲಯದಲ್ಲಿ ಸ್ಥಳಾವಕಾಶ ನೀಡುವಂತೆ ತಿಳಿಸಿ ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆ, ಮೈಸೂರು ಇವರು ಈ ಹಿಂದೆ ಕೋರಿದ್ದರು.

ಈ ಸಂಬಂಧ ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆ, ಮೈಸೂರು ಇವರಿಗೆ ವಿವಿನಿಲಯದಿಂದ ಪತ್ರವನ್ನು ಬರೆದು ತಮ್ಮ ಸಂಸ್ಥೆಯ 80 ವಿದ್ಯಾರ್ಥಿಗಳಿಗೆ ವಿವಿನಿಲಯದ ಪುರಷರ ವಿದ್ಯಾರ್ಥಿನಿಲಯದಲ್ಲಿ ಸ್ಥಳಾವಕಾಶವನ್ನು ನೀಡಲು ತೀರ್ಮಾನಿಸಲಾಗಿದ್ದು ಓರ್ವ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ. 100/-ಗಳಂತೆ ಬಾಡಿಗೆಯನ್ನು ನಿಗದಿಪಡಿಸಿದೆ. ತಾವು ಕೋರಿರುವ 80 ವಿದ್ಯಾರ್ಥಿಗಳಿಗೆ ಒಂದು ದಿನಕ್ಕೆ ರೂ. 8,000/-ಗಳಾಗಲಿದ್ದು ಒಂದು ಮಾಹೆಗೆ ರೂ. 2,40,000/-ಗಳಂತೆ, 12 ಮಾಹೆಗಳಿಗೆ ಒಟ್ಟು ಬಾಡಿಗೆ ರೂ. 28,80,000/-ಗಳಾಗಲಿವುದರಿಂದ ಸದರಿ ಮೊತ್ತವನ್ನು ವಿವಿನಿಲಯಕ್ಕೆ ಪಾವತಿಸಿದ್ದಲ್ಲಿ ತಾವು ಕೋರಿರುವ 80 ವಿದ್ಯಾರ್ಥಿಗಳಿಗೆ ವಿವಿನಿಲಯದ ಪುರುಷರ ವಿದ್ಯಾರ್ಥಿನಿಲಯದಲ್ಲಿ ಸ್ಥಳಾವಕಾಶವನ್ನು ಕಲ್ಪಿಸುವುದಾಗಿ ತಿಳಿಸಲಾಗಿರುತ್ತದೆ ಮತ್ತು ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ವಿವಿನಿಲಯ ನಿಗದಿಪಡಿಸಿದ್ದಂತಹ ಬಾಡಿಗೆ ಶುಲ್ಕವನ್ನು ಪಾವತಿಸುವಂತೆ ತಿಳಿಸಿ ದಿ: 23.02.2021ರಂದು ಮತ್ತೊಮ್ಮೆ ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನ ಸಂಸ್ಥೆ, ಮೈಸೂರು ಪತ್ರವನ್ನು ಬರೆಯಲಾಗಿದ್ದು ಇದಕ್ಕೆ ಸದರಿ ಸಂಸ್ಥೆಯ ಮುಖ್ಯಸ್ಥರು ವಿವಿನಿಲಯಕ್ಕೆ ಪತ್ರವನ್ನು ಬರೆದು ನಮ್ಮ ಸಂಸ್ಥೆಯಲ್ಲಿ ಗ್ರಾಮೀಣ ಪ್ರದೇಶದಿಂದ ಬಂದ ಬಡ ಹಾಗೂ ಶೋಷಿತ ವರ್ಗದ ವಿದ್ಯಾರ್ಥಿಗಳಿದ್ದು ಇವರಿಂದ ವಿವಿನಿಲಯವು ನಿಗದಿಪಡಿಸಿರುವ ಶುಲ್ಕವನ್ನು ವಸೂಲಿ ಮಾಡಿ ಭರಿಸುವುದು ಕಷ್ಟಸಾಧ್ಯವಾಗಿರುತ್ತದೆ ಮತ್ತು ನಮ್ಮ ಸಂಸ್ಥೆಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗುತ್ತಿಲ್ಲವಾದ್ದರಿಂದ ತಾವು ನಿಗದಿಪಡಿಸಿರುವ ಬಾಡಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಬೇಕೆಂದು ಕೋರಿರುವುದರಿಂದ ಸದರಿ ಸಂಸ್ಥೆಯ ಮುಖ್ಯಸ್ಥರು ಕೋರಿರುವ ವಿಷಯಕ್ಕೆ ಸಂಬಂಧಪಟ್ಟಂತೆ ವಿವಿನಿಲಯದ ಪುರುಷರ ವಿದ್ಯಾರ್ಥಿನಿಲಯಕ್ಕೆ ಬಾಡಿಗೆ ನಿಗದಿಪಡಿಸುವ ಬಗೆಗಿನ ವಿಷಯವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

* * * * *

<u>ತೀರ್ಮಾನ</u> :

ಸದರಿ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಲಾಯಿತು. ಗ್ರಾಮೀಣ ಪ್ರದೇಶದಿಂದ ಬಂದ ಬಡ ಹಾಗೂ ಶೋಷಿತ ವರ್ಗದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿ ವಿದ್ಯಾರ್ಥಿಗೆ ದಿನವೊಂದಕ್ಕೆ ರೂ.60/- ಗಳನ್ನು ಬಾಡಿಗೆಯಾಗಿ ನಿಗದಿಪಡಿಸುವಂತೆ ತೀರ್ಮಾನಿಸಲಾಯಿತು.

ಕುಲಪತಿಗಳು

ಕುಲಸಚಿವರು.

ವಿಷಯ ಸಂಖ್ಯೆ: 165.03

ವಿಷಯ : ಶ್ರೀ ಎನ್. ಶಿವಣ್ಣ, ದ್ವಿತೀಯ ದರ್ಜೆ ಗುಮಾಸ್ತರು, ಕರಾಮುವಿ ಪ್ರಾದೇಶಿಕ ಕೇಂದ್ರ, ಕಾರವಾರ, ಇವರ ವಿರುದ್ಧ ಇಲಾಖಾ ವಿಚಾರಣೆಯ ಸಂಬಂಧದಲ್ಲಿ ಅಂತಿಮ ಆದೇಶ ಹೊರಡಿಸಿರುವ ಕುರಿತು.

* * * * * *

ಶ್ರೀ ಎನ್. ಶಿವಣ್ಣ, ದ್ವಿತೀಯ ದರ್ಜೆ ಗುಮಾಸ್ತರು, ಕರಾಮುವಿ ಪ್ರಾದೇಶಿಕ ಕೇಂದ್ರ, ಕಾರವಾರ, ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಗಳು, ವಿಚಾರಣೆ ನಡೆಸಿ ಸಲ್ಲಿಸಿದ್ದ ದಿನಾಂಕ: 08.12.2020ರ 'ವಿಚಾರಣಾ ವರದಿ'ಯಲ್ಲಿ, ಸದರಿಯವರ ಮೇಲೆ ಮಾಡಲಾಗಿರುವ ಆರೋಪಗಳು ಸಾಬೀತಾಗಿರುತ್ತವೆ ಎಂದು ತಿಳಿಸಿರುತ್ತಾರೆ.

ಸದರಿ ವಿಚಾರಣಾ ವರದಿಯನ್ನು ದಿನಾಂಕ: 02.01.2021 ರಂದು ನಡೆದ 163ನೇ ವ್ಯವಸ್ಥಾಪನಾ ಮಂಡಳಿಯ ಸಭೆಗೆ ವಿಷಯ ಮಂಡಿಸಲಾಗಿ, ಸದರಿ ಸಭೆಯು ಕರಾಮುವಿ ನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿ.ವಿ.ನಿಲಯದ ಸಿ.ಸಿ.ಎ ನಿಯಮ ಭಾಗ-3ರ ಶಿಸ್ತು ಮತ್ತು ದಂಡನೆಗಳ ನಿಯಮ 5 (1)(iii)ರ ಅನುಸಾರ ಯಾವುದೇ ಸಂಚಿತ ಪರಿಣಾಮವಿಲ್ಲದೇ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವಂತೆ ಹಾಗೂ (v) ರಂತೆ ದುರುಪಯೋಗವಾಗಿರುವ ಹಣವನ್ನು ಬಡ್ಡಿ ಸಮೇತ ವಿ.ವಿ. ಖಾತೆಗೆ ವಸೂಲಾತಿ ಮಾಡುವಂತೆ ತೀರ್ಮಾನವಾಗಿರುತ್ತದೆ.

ಸದರಿ ವ್ಯವಸ್ಥಾಪನಾ ಮಂಡಳಿಯ ತೀರ್ಮಾನವನ್ನು ಅನುಷ್ಠಾನಗೊಳಿಸಲು ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸದರಿ ನೌಕರರನ್ನು ಸೇವೆಗೆ ಮರುನಿಯುಕ್ತಿಗೊಳಿಸಿ ದಿನಾಂಕ: 05.03.2021ರಂದು ಆದೇಶವನ್ನು ಹೊರಡಿಸಲಾಗಿದೆ.

ಅದರಂತೆ, ಸದರಿಯವರು ದಿನಾಂಕ: 15.03.2021ರಂದು ಕರ್ತವ್ಯದ ಮೇಲೆ ವರದಿ ಮಾಡಿಕೊಂಡು ಕರಾಮುವಿ ಪ್ರಾದೇಶಿಕ ಕೇಂದ್ರ, ಕಾರವಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಚಾರಣಾಧಿಕಾರಿಗಳ 'ವಿಚಾರಣಾ ವರದಿ' ಹಾಗೂ ವ್ಯವಸ್ಥಾಪನಾ ಮಂಡಳಿಯ 163ನೇ ಸಭೆಯ (ವಿ.ಸಂ:163.05) ರಲ್ಲಿನ ತೀರ್ಮಾನದಂತೆ 'ವಹಿಸಿರುವ ಕ್ರಮದ ವರದಿ'ಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಗಮನಕ್ಕೆ ತರಲಾಗಿದೆ.

* * * * * * *

ತೀರ್ಮಾನ : ಸದರಿ ವಿಷಯವು ಈ ಹಿಂದೆ ನಡೆದ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಚರ್ಚೆಗೊಂಡು, ತೀರ್ಮಾನಗೊಂಡಿದ್ದು, ಅದರಂತೆ ಕ್ರಮವಹಿಸಲಾಗಿದೆ ಎಂಬ ಅಂಶವನ್ನು ಕುಲಪತಿಗಳು ಸಭೆಯ ಗಮನಕ್ಕೆ ತಂದರು.

* * * * * * *

ವಿಷಯ ಸಂಖ್ಯೆ: 165.04

ವಿಷಯ : ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿ ಮುದ್ರಣಕ್ಕೆ ಟೆಂಡರ್ ದರ ನಿಗದಿಪಡಿಸುವ ಬಗೆಗೆ.

* * * * * *

ಜನವರಿ 2020-21 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಿಸಲು ಕೊರತೆಯಾಗಿರುವ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: ಕರಾಮುವಿ/ಅಸಾವಿ/01-23/2020-21, ದಿನಾಂಕ: 18/03/2021 ರಂದು ಕೆ.ಟಿ.ಪಿ.ಪಿ ಆಕ್ಟ್‌ಗೆ ಅನುಗುಣವಾಗಿ ದ್ವಿ ಲಕೋಟೆ

ಕುಲಪತಿಗಳು



ಕುಲಸಚಿವರು

ಪದ್ಧತಿಯಲ್ಲಿ ಆಹ್ವಾನಿಸಲಾಗಿತ್ತು ಟೆಂಡರ್‌ನಲ್ಲಿ ಭಾಗವಹಿಸಿದ 05 ಮಂದಿ ಮುದ್ರಕರಲ್ಲಿ ಅರ್ಹತಾ ಬಿಡ್ ಪರಿಶೀಲನೆಯಲ್ಲಿ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿಯ ಶಿಪಾರಸ್ಸಿನಂತೆ ಮೆ|| ಪೂರ್ಣಿಮ ಪ್ರಿಂಟರ್ಸ್ ಬೆಂಗಳೂರು ಹಾಗೂ ಮಣಿಪಾಲ್ ಟೆಕ್ನಾಲಜೀಸ್ ಲೀ, ಮಣಿಪಾಲ್ ರವರುಗಳನ್ನು ಅರ್ಹ ಮುದ್ರಕರುಗಳನ್ನಾಗಿ ಟೆಂಡರ್ ಸಮಿತಿಯ ಶಿಪಾರಸ್ಸಿನಂತೆ ವಿಶ್ವವಿದ್ಯಾನಿಲಯ ಅಂಗೀಕರಿಸಿರುತ್ತದೆ ಅಂಗೀಕೃತ ಮುದ್ರಕರ ಆರ್ಥಿಕ ಬಿಡ್ (Financial Bid) ಅನ್ನು ತೆರೆಯಲಾಗಿತ್ತು.

ಸದರಿ ಮುದ್ರಕರು ಆನ್‌ಲೈನಲ್ಲಿ ಸಲ್ಲಿಸಿದ ಐಟಂವಾರು ದರಗಳಿಗೆ ಶೇಕಡವಾರು ರಿಯಾಯಿತಿ ಪಡೆಯಲು ದಿನಾಂಕ: 25/05/2021 ರಂದು ಮುದ್ರಕರೊಂದಿಗೆ (Covid-19 Lock Down ಹಿನ್ನೆಲೆಯಲ್ಲಿ) Video Conference ಮೂಲಕ ಮಾನ್ಯ ಕುಲಪತಿಗಳು ಹಾಗು ಕುಲಸಚಿವರು ದರ ಸಂಧಾನ ಸಭೆ ನಡೆಸಲಾಗಿದ್ದು ಐಟಂವಾರು ಶೇಕಡ 3 ರಷ್ಟು ಕಡಿಮೆ ಮಾಡುವುದಾಗಿ ಮುದ್ರಕರು ಲಿಖಿತವಾಗಿ ಪತ್ರ ನೀಡಿರುತ್ತಾರೆ.

ಈ ಸಂಬಂಧ ಟೆಂಡರ್ ಸಮಿತಿಯ ಶಿಪಾರಸ್ಸಿನಂತೆ ಮೆ|| ಪೂರ್ಣಿಮ ಪ್ರಿಂಟರ್ಸ್ ಬೆಂಗಳೂರು ಹಾಗೂ ಮೆ|| ಮಣಿಪಾಲ್ ಟೆಕ್ನಾಲಜೀಸ್ ಲೀ, ಮಣಿಪಾಲ್ ಇವರುಗಳನ್ನು ವಿಶ್ವವಿದ್ಯಾನಿಲಯವು ಅಂಗೀಕರಿಸಲು ಹಾಗು ಟೆಂಡರ್ ಮೂಲಕ ಸಲ್ಲಿಸಲಾಗಿದ್ದ ದರಗಳನ್ನು ಸಂಧಾನದ ಮೂಲಕ ಶೇಕಡ 3ರ ರಿಯಾಯಿತಿ ನಂತರ ಪರಿಷ್ಕರಿಸಿದ ದರಗಳ ನಡವಳಿಯನ್ನು ಅಂಗೀಕರಕ್ಕಾಗಿ ಹಾಗು ಅಂಗಿಕೃತ ದರಗಳನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸ್ಥಾಯಿ ಆದೇಶ ಹೊರಡಿಸಿದ್ದು ಸದರಿ ಸ್ಥಾಯಿ ಆದೇಶದ ದರಗಳಲ್ಲಿ ಮುದ್ರಣದ ಕೆಲಸಗಳನ್ನು ನಿರ್ವಹಿಸುವ ಸಂಬಂಧ ವ್ಯವಸ್ಥಾಪನ ಮಂಡಳಿ ಸಭೆಯ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> : **ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.**

* * * * * * *

**<u>ವಿಷಯ ಸಂಖ್ಯೆ: 165.05</u>**

<u>ವಿಷಯ</u> : **28ನೇ ಕಾಗದ ಗುಣಮಟ್ಟ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗೆಗೆ.**

* * * * * *

2019-20 ನೇ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ವಿತರಿಸಲು ಕೊರತೆಯಾಗಿರುವ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ವಿವಿ ನಿಲಯವು ನಿಗದಿಪಡಿಸಿರುವ ದರಗಳಲ್ಲಿ ಖಾಸಗಿ ಮುದ್ರಕರಿಂದ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಲಾಗಿರುತ್ತದೆ. ಪ್ರಸ್ತುತ ಮುದ್ರಕರ ಹುಂಡಿಗಳಲ್ಲಿ ಕಾಗದ ಗುಣಮಟ್ಟ ಪರೀಕ್ಷೆಯ ಉದ್ದೇಶದಿಂದ ಪ್ರತಿ ಹುಂಡಿಯಲ್ಲಿ ಶೇಕಡ 25 ರ ಮೊತ್ತವನ್ನು ವಿ ವಿ ನಿಲಯವು ಉಳಿಸಿಕೊಂಡಿದ್ದು, ವಿವಿ ನಿಲಯವು ರಚಿಸಿರುವ ತಾಂತ್ರಿಕ ತಜ್ಞರನ್ನು ಒಳಗೊಂಡಂತೆ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯನ್ನು ದಿನಾಂಕ: 09-06-2021 ರಂದು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಮುದ್ರಕರು ಮುದ್ರಿಸಿ ಸರಬರಾಜು ಮಾಡಿರುವ ಅಧ್ಯಯನ ಸಾಮಗ್ರಿಗಳ ಕಾಗದ ಗುಣಮಟ್ಟ ಪರೀಕ್ಷೆಯನ್ನು ಸರ್ಕಾರಿ ಮುದ್ರಣಾಲಯದ ತಾಂತ್ರಿಕ ತಜ್ಞರ ಉಪಸ್ಥಿತಿಯಲ್ಲಿ ಸಮಿತಿಯು ಪರಿಶೀಲಿಸಿ, ದೃಢೀಕರಿಸಿದ್ದು, ನಿಯಮಾನುಸಾರ ವಿವಿ ನಿಲಯವು ಉಳಿಸಿಕೊಂಡಿರುವ ಮೊತ್ತವನ್ನು ಪಾವತಿಸಬಹುದೆಂದು ಸಮಿತಿಯು ಶಿಪಾರಸ್ಸು ಮಾಡಿರುತ್ತದೆ. ಸದರಿ ಸಭೆಯ ನಡವಳಿಯಂತೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಂಬಂಧಪಟ್ಟ

ಕುಲಪತಿಗಳು



ಕುಲಸಚಿವರು

ಮುದ್ರಕರಿಗೆ ಶೇಕಡ 25 ರ ಹುಂಡಿ ಪಾವತಿಸಲಾಗಿದ್ದು ಸದರಿ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

* * * * * *

<u>ತೀರ್ಮಾನ</u> : ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು ಹಾಗೂ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

* * * * * * *

<u>ವಿಷಯ ಸಂಖ್ಯೆ: 165.06</u>

ವಿಷಯ : ಪರೀಕ್ಷಾ ವಿಭಾಗದ ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣ-ಗೊಳಿಸುವ ತಂತ್ರಾಂಶಗಳು ಮತ್ತು ಉಪಕರಣಗಳ ಖರೀದಿ ಬಗೆಗೆ.

* * * * *

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದ ನಡೆಸಲಾಗುವ ಪರೀಕ್ಷಾ ಕಾರ್ಯಗಳು ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಮೂಲಭೂತ ಸೌಲಭ್ಯಗಳನ್ನು ಮೇಲ್ದರ್ಜೆಗೆ ನವೀಕರಿಸಿ, ಪರೀಕ್ಷಾ ವಿಭಾಗದ ಸೇವೆ ಮತ್ತು ಕಾರ್ಯಗಳ ಸುಲಲಿತ ನಿರ್ವಹಣೆ ಸಲುವಾಗಿ ಪರೀಕ್ಷಾ ಕಾರ್ಯಗಳನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸುವ ಸಂಬಂಧ ದಿನಾಂಕ: 16.02.2021 ರಂದು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಾಂತ್ರಿಕ ಸಮಿತಿಯನ್ನು ರಚಿಸಲಾಗಿರುತ್ತದೆ (ಅನುಬಂಧ-1), ಸದರಿ ಸಮಿತಿಯು ದಿನಾಂಕ: 16.02.2021 ರಂದು ಸಭೆ ಸೇರಿ ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ ಸಂಬಂಧ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ತಂತ್ರಾಂಶ, ಗಣಕ ಯಂತ್ರ, ಸ್ಕ್ಯಾನರ್, ಪ್ರಿಂಟರ್ ಹಾಗೂ ಇತರೆ ಉಪಕರಣಗಳ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ, ಈ ಉಪಕರಣಗಳು ಮತ್ತು ತಂತ್ರಾಂಶದ ಮೊತ್ತ ರೂ.2,44,01,200/- (ರೂ. ಎರಡು ಕೋಟಿ ನಲವತ್ತನಾಲ್ಕು ಲಕ್ಷದ ಒಂದು ಸಾವಿರದ ಇನ್ನೂರು ಮಾತ್ರ) ಗಳಾಗಬಹುದೆಂದು ಅಂದಾಜಿಸಲಾಗಿರುತ್ತದೆ (ಅನುಬಂಧ-2).

ಮುಂದುವರೆದು, ಸದರಿ ಉಪಕರಣ ಮತ್ತು ತಂತ್ರಾಂಶಗಳನ್ನು ನಿಯಮಾನುಸಾರ ಖರೀದಿ ಪ್ರಕ್ರಿಯೆ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> :

ವಿಷಯವನ್ನು ಗಂಭೀರವಾಗಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಈ ಹಿಂದೆ ಪರೀಕ್ಷಾಂಗ ವಿಭಾಗದ ಕಾರ್ಯಗಳನ್ನು ಖಾಸಗಿಯವರಿಗೆ ನೀಡಿದ್ದರ ವಿವರಗಳನ್ನು ಸಭೆಯಲ್ಲಿ ವಿವರಿಸಿದರು. ವಿ.ವಿ.ನಿಲಯವು ತತ್‌ಕ್ಷಣದಲ್ಲಿ ಪರೀಕ್ಷೆ ನಡೆಸಿ, ಮೌಲ್ಯಮಾಪನಾ ಕಾರ್ಯವನ್ನು ತುರ್ತಾಗಿ ನಡೆಸಬೇಕಿರುವ ಹಿನ್ನೆಲೆಯಲ್ಲಿ, ಪರೀಕ್ಷಾ ಚಟುವಟಿಕೆಗಳನ್ನು ಶೀಘ್ರದಲ್ಲಿ ಡಿಜಿಟಲೀಕರಣಗೊಳಿಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಎನ್. ಅಪ್ಪಾಜಿಗೌಡರವರು ಮಾತನಾಡಿ, ಪರೀಕ್ಷಾ ಕೆಲಸಗಳನ್ನು ಖಾಸಗಿ ಸಂಸ್ಥೆಯವರಿಗೆ ನೀಡುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು. ಸದರಿ ಉಪಕರಣ ಹಾಗೂ ತಂತ್ರಾಂಶಗಳನ್ನು ನಿಯಮಾನುಸಾರ ಖರೀದಿಸುವ ಪ್ರಕ್ರಿಯೆಗೆ ಅನುಮೋದನೆ ನೀಡಿತು.

* * * * * * *

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ 165.07

ವಿಷಯ : ಯು.ಜಿ.ಸಿ. ನವದೆಹಲಿ, ವತಿಯಿಂದ ಮಂಜೂರಾಗಿದ್ದ ಒಂದು ಕೋಟಿಯನ್ನು ICT **infrastructure** ಅಭಿವೃದ್ಧಿಪಡಿಸಲು ಉಪಯೋಗಿಸಿರುವ ಪ್ರಕ್ರಿಯೆಗೆ ಅನುಮೋದನೆ ಕೋರಿ.

*****

ಯು.ಜಿ.ಸಿ. ನವದೆಹಲಿ, ಯಿಂದ ವಿವಿ ನಿಲಯಕ್ಕೆ "Assistance to IGNOU & SOUs with a view to its overall Strengthening and development of Course Materials, Development and Applications of New Technology, Development of MOOCs Computerization ICT and Quality Assurance Measures, Networking and Distance Education System etc., in Universities" ಎಂಬ ಶೀರ್ಷಿಕೆಯಡಿಯಲ್ಲಿ 2020-21ರ ಆರ್ಥಿಕ ವರ್ಷದಲ್ಲಿ ಉಪಯೋಗಿಸಿಕೊಳ್ಳಲು ರೂ.1,00,00,000/- (ರೂ. ಒಂದು ಕೋಟಿ ಮಾತ್ರ)ಗಳ ಅನುದಾನವನ್ನು ನೀಡಿ, ಈ ಮೊತ್ತವನ್ನು ದಿನಾಂಕ: 31.03.2021 ರೊಳಗೆ ಉಪಯೋಗಿಸಿಕೊಳ್ಳುವಂತೆ ದಿನಾಂಕ: 19.03.2021 ರಂದು ಕುಲಸಚಿವರಿಗೆ ಇ-ಮೇಲ್ ಮೂಲಕ ತಿಳಿಸಿರುತ್ತಾರೆ (ಅನುಬಂಧ-1) ಹಾಗೂ ಬಳಕೆ ಪ್ರಮಾಣ ಪತ್ರ (Utilization Certificate) ವನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಯು.ಜಿ.ಸಿ. ಯವರು ತಿಳಿಸಿರುವಂತೆ ICT Infrastructure ಗೆ ಅವಶ್ಯವಿದ್ದ ಕೆಳಕಂಡ ಉಪಕರಣಗಳನ್ನು 4ಜಿ ನಿಯಮದಡಿ ಸರ್ಕಾರಿ ಸೌಮ್ಯ ಸಂಸ್ಥೆಯಾದ ಮೆ. ಕಿಯೋನಿಕ್ಸ್, ಬೆಂಗಳೂರು, ರವರಿಂದ ಒಟ್ಟು ಮೊತ್ತ ರೂ.99,49,986/- (ರೂ. ತೊಂಭತ್ತೊಂಭತ್ತು ಲಕ್ಷದ ನಲವತ್ತೊಂಭತ್ತು ಸಾವಿರದ ಒಂಭೈನೂರ ಎಂಭತ್ತಾರು ಮಾತ್ರ) ಗಳಿಗೆ ಖರೀದಿಸಲಾಗಿರುತ್ತದೆ.

| Sl. No. | Item | Quantity | Amount |
|---|---|---|---|
| 1 | Dell Desktop computers | 21 | 18,60,829/- |
| 2 | Dell Laptops | 30 | 40,79,992/- |
| 3 | Canon Digital Multifunctional Printers | 30 | 13,00,950/- |
| 4 | Ricoh Digital Multifunctional Copier | 10 | 27,07,215/- |
| | | **Total Rs.** | **99,48,986/-** |

ಯು.ಜಿ.ಸಿ. ನವದೆಹಲಿ, ರವರು 2020-21ನೇ ಸಾಲಿಗೆ ಬಿಡುಗಡೆ ಮಾಡಿದ್ದ ಮೊತ್ತವನ್ನು ನಿಗದಿತ ದಿನಾಂಕ: 31.03.2021 ರೊಳಗಾಗಿ ಉಪಯೋಗಿಸಿಕೊಳ್ಳಬೇಕಾಗಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಮೆ.ಕಿಯೋನಿಕ್ಸ್, ಬೆಂಗಳೂರು, ರವರಿಂದ ತುರ್ತಾಗಿ ಅವಶ್ಯವಿದ್ದ ICT Infrastructure ಉಪಕರಣಗಳನ್ನು ಖರೀದಿಸಿ ಹುಂಡಿ ಪಾವತಿಸಲಾಗಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

* * * * *

ತೀರ್ಮಾನ :

ವಿಷಯವನ್ನು ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಒಪ್ಪಿತು.

* * * * * * *

ಕುಲಪತಿಗಳು ಕುಲಸಚಿವರು

ವಿಷಯ ಸಂಖ್ಯೆ : 165.08

ವಿಷಯ : ವಿಶ್ವವಿದ್ಯಾನಿಲಯದಲ್ಲಿ ದತ್ತಾಂಶ ಶೇಖರಣೆ (In-house Data Centre) ಕೇಂದ್ರವನ್ನು ಸ್ಥಾಪಿಸುವ ಬಗ್ಗೆ.

* * * * *

ಉನ್ನತ ಶಿಕ್ಷಣದ ಎಲ್ಲಾ ಶೈಕ್ಷಣಿಕ, ಆಡಳಿತಾತ್ಮಕ, ಹಣಕಾಸು ಹಾಗೂ ಪರೀಕ್ಷಾ ವಿಭಾಗಗಳ ಕಾರ್ಯಚಟುವಟಿಕೆಗಳನ್ನು ಐ.ಸಿ.ಟಿ. ಬಳಕೆಯ ಮೂಲಕ ಡಿಜಿಟಲೀಕರಣಗೊಳಿಸಿ ಆಡಳಿತದಲ್ಲಿ ದಕ್ಷತೆ, ಪಾರದರ್ಶಕತೆಯನ್ನು ಹೆಚ್ಚಿಸಬೇಕೆಂದು ಯು.ಜಿ.ಸಿ., ಮಾನವ ಸಂಪನ್ಮೂಲ ಇಲಾಖೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿರ್ದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕರಾಮುವಿ ನಿಲಯದ ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿ, ಪರೀಕ್ಷಾ ಪ್ರಕ್ರಿಯೆ, ಫಲಿತಾಂಶ ಪ್ರಕಟಣೆ, ಕೋಡಿಂಗ್, ಡಿ-ಕೋಡಿಂಗ್, ಪ್ರವೇಶಾತಿ, ಪ್ರವೇಶ ಪತ್ರ ನೀಡುವುದು ಎಲ್ಲಾ ರೀತಿಯ ಶುಲ್ಕ ಪಾವತಿ ಮುಂತಾದ ಅಂಕಿ-ಅಂಶಗಳು, ಮಾಹಿತಿಗಳ ಡಿಜಿಟಲೀಕರಣಗೊಳಿಸಿ ಗೌಪ್ಯತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ವಿವಿ ನಿಲಯದಲ್ಲಿ ದತ್ತಾಂಶ ಶೇಖರಣೆ (In-house Data Centre) ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಅಂದಾಜು ಮೊತ್ತ ರೂ. ಮೂರು ಕೋಟಿ ಐವತ್ತು ಲಕ್ಷ ತಗಲಬಹುದೆಂದು ಅಂದಾಜಿಸಿ ವಿಷಯವನ್ನು 160ನೇ ವ್ಯವಸ್ಥಾಪನಾ ಮಂಡಳ ಸಭೆಗೆ ಮಂಡಿಸಲಾಗಿ ಸಭೆಯು ಈ ಬಗ್ಗೆ ಚರ್ಚಿಸಿ ಕಿಯೋನಿಕ್ಸ್ / ಇ-ಟೆಂಡರ್ ಮೂಲಕ ಖರೀದಿಸುವ ಬಗ್ಗೆ ತೀರ್ಮಾನವಾಗಿರುತ್ತದೆ (ಪ್ರತಿ ಲಗತ್ತಿಸಿದೆ-1).

ಮಾನ್ಯ ಕುಲಪತಿಗಳ ನಿರ್ದೇಶನದಂತೆ ಅಲ್ಪಾವಧಿ ಟೆಂಡರ್ ಅನ್ನು ದಿನಾಂಕ: 30.11.2020 ರಂದು ಆಹ್ವಾನಿಸಿ ನಿಯಮಾನುಸಾರ ಪತ್ರಿಕೆಗಳಲ್ಲಿ ಜಾಹಿರಾತು ಹೊರಡಿಸಲಾಗಿರುತ್ತದೆ ಮತ್ತು ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿಯವರಿಗೂ ಸಹ ಮಾಹಿತಿಯನ್ನು ಒದಗಿಸಲಾಗಿರುತ್ತದೆ. ಸದರಿ ಟೆಂಡರ್ ಅನ್ನು ದಿನಾಂಕ: 05.01.2021 ರಂದು ಪರಿಶೀಲಿಸಲಾಗಿ ಎರಡು ಸಂಸ್ಥೆಯವರು ಸಲ್ಲಿಸಿದ್ದ ಇ.ಎಂ.ಡಿ. ಬಗ್ಗೆ ಸಲಹೆ ಪಡೆಯುವ ಸಂಬಂಧ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿಗೆ ವಿಷಯವನ್ನು ಮಂಡಿಸಲಾಗಿ ಸಮಿತಿಯು ಟೆಂಡರ್‌ಅನ್ನು ಮರು ಆಹ್ವಾನಿಸುವಂತೆ ತಿಳಿಸಿರುತ್ತದೆ. ಅದರಂತೆ ದಿನಾಂಕ: 18.01.2021 ರಂದು ಮತ್ತೊಮ್ಮೆ ಅಲ್ಪಾವಧಿ ಮರು ಟೆಂಡರ್ ಅನ್ನು ಆಹ್ವಾನಿಸಲಾಗಿ ಎರಡು ಸಂಸ್ಥೆಯವರು ಭಾಗವಹಿಸಿದ್ದು ಸದರಿ ಸಂಸ್ಥೆಯವರು ಸಲ್ಲಿಸಿದ ದಾಖಲಾತಿಗಳ ಪರಿಶೀಲನೆಗಾಗಿ ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ Technical Evaluation Committee ಯು ಸದರಿ ಎರಡು ಸಂಸ್ಥೆಯವರು ಸಲ್ಲಿಸಿರುವ ದಾಖಲಾತಿಗಳು ತಾಂತ್ರಿಕವಾಗಿ ಅರ್ಹತೆ ಹೊಂದಿಲ್ಲದ ಕಾರಣವಾಗಿ ಆರ್ಥಿಕ ಬಿಡ್‌ಗೆ ಪರಿಗಣಿಸಬಾರದೆಂದು ತೀರ್ಮಾನಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ತುರ್ತಾಗಿ ಕ್ರಮ ಕೈಗೊಳ್ಳುವ ಸಲುವಾಗಿ 10 (ಹತ್ತು) ದಿನಗಳಿಗೆ ನಿಗದಿಪಡಿಸಿ ಅಲ್ಪಾವಧಿ ಮರು ಟಂಡರ್ ಆಹ್ವಾನಿಸುವಂತೆ ತಿಳಿಸಿರುತ್ತಾರೆ. ಅದರಂತೆ KSOU/IT/DATA CENTRE-38/2020-21/IND-25/CALL-3 ದಿನಾಂಕ: 04.03.2021 ರಂದು ನಿಯಮಾನುಸಾರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿ ಕೆಳಕಂಡ ಮೂರು ಸಂಸ್ಥೆಯವರು ಭಾಗವಹಿಸಿದ್ದು ಸದರಿಯವರುಗಳ ತಾಂತ್ರಿಕ ಬಿಡ್‌ಅನ್ನು Technical Evaluation Committee ಯವರು ಪರಿಶೀಲಿಸಿ ಮೂರು ಸಂಸ್ಥೆಯನ್ನು ಆರ್ಥಿಕ ಬಿಡ್‌ಗೆ ಪರಿಗಣಿಸಿ ತೀರ್ಮಾನಿಸಿರುತ್ತಾರೆ. ಆರ್ಥಿಕ ಬಿಡ್‌ಅನ್ನು ತೆರೆಯಲಾಗಿ ಕೆಳಕಂಡಂತೆ ಮೂರು ಸಂಸ್ಥೆಯವರು ದರಗಳನ್ನು ನಮೂದಿಸಿರುತ್ತಾರೆ.

| Sl. No | Company | Quoted Rate | Remarks |
|---|---|---|---|
| 1 | M/s. Cadmaxx Solutions Pvt., Ltd., | 4,53,12,000 | L1 |
| 2 | M/s. Nihon Communication Solutions Pvt., Ltd. | 4,66,10,000 | L2 |
| 3 | M/s. Convergent Wireless Communications Pvt., Ltd. | 5,12,65,400 | L3 |

Tender Accepting Committee ಯವರು L1 ರವರನ್ನು ದರ ಸಂಧಾನಕ್ಕೆ ಆಹ್ವಾನಿಸಲಾಗಿ ಸದರಿ ಸಂಸ್ಥೆಯವರು ರೂ.3,90,00,000/-(ಮೂರು ಕೋಟಿ ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ, ಎಲ್ಲಾ ತೆರಿಗೆ

ಕುಲಪತಿಗಳು



ಕುಲಸಚಿವರು.

ರಿ) In-house Data Centre ಅನ್ನು ಸ್ಥಾಪಿಸಲು ಒಪ್ಪಿಗೆ ನೀಡಿರುತ್ತಾರೆ. ಅದರಂತೆ Tender Accepting Committee ಯವರ ತೀರ್ಮಾನದಂತೆ M/s. Cadmaxx Solutions Pvt., Ltd., ರವರಿಗೆ Letter of Intent ನೀಡಿ ದಿನಾಂಕ: 21.04.2021 ರಂದು ಕಾರ್ಯಾದೇಶವನ್ನು ನೀಡಿ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ದತ್ತಾಂಶ ಶೇಖರಣೆ (In-house Data Centre) ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಕೈಗೊಂಡಿರುವ ಪ್ರಕ್ರಿಯೆಗಳಿಗೆ ಹಾಗೂ ಅಂದಾಜು ವೆಚ್ಚಕ್ಕಿಂತ ಹೆಚ್ಚುವರಿಯಾಗಿ ಆಗಿರುವ ರೂ.40,00,000/- (ರೂ. ನಲವತ್ತು ಲಕ್ಷ ಮಾತ್ರ) ಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

* * * * * * *

<u>ತೀರ್ಮಾನ</u> :

**ವಿಷಯವನ್ನು ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ದತ್ತಾಂಶ ಶೇಖರಣೆ (In-house Data Centre) ಕೇಂದ್ರವನ್ನು ಸ್ಥಾಪಿಸುವ ಸಂಬಂಧ ವಿ.ವಿ.ಯು ನಡೆಸಿರುವ ಟೆಂಡರ್ ಪ್ರಕ್ರಿಯೆಯ ಕ್ರಮವನ್ನು ವಿವರಿಸಿದರು. ನಂತರ, ಸಭೆಯು, ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಮೋದಿಸಿತು. ಹಾಗೂ ಅಂದಾಜು ವೆಚ್ಚಕ್ಕಿಂತ ಆಗಿರುವ ಹೆಚ್ಚುವರಿ ವೆಚ್ಚಕ್ಕೆ ಅನುಮೋದನೆ ನೀಡಿತು.**

* * * * * * *

<u>ವಿಷಯ ಸಂಖ್ಯೆ : 165.09</u>

ವಿಷಯ : **ವಿಶ್ವವಿದ್ಯಾನಿಲಯದ ಕೇಂದ್ರ ಕಛೇರಿಯ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ Wi-fi ಸೌಲಭ್ಯವನ್ನು ನೀಡುವ ಬಗ್ಗೆ.**

* * * * *

ವಿಶ್ವವಿದ್ಯಾನಿಲಯದ ಸುಸೂತ್ರ ಕಾರ್ಯನಿರ್ವಹಣೆ, ಶೈಕ್ಷಣಿಕ ಚಟುವಟಿಕೆಗಳಿಗೆ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿವಿ ನಿಲಯದಲ್ಲಿ ಕೆಳಕಂಡ ICT Initiative ಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

| | |
|---|---|
| Online Admission | Computer Labs |
| KSOU Student APP | Virtual Lab |
| KSOU Connect – Online Platform | Video Conference Hall |
| Data Centre | E-Governance |
| Audio-Video Recording of Classes | E-Office |

ಈ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಹೆಚ್ಚಿನ ಸಾಮರ್ಥ್ಯದ ಇಂಟರ್‌ನೆಟ್ ಸೌಲಭ್ಯವನ್ನು NMEICT/NKN Project ಅಡಿಯಲ್ಲಿ ಬಿ.ಎಸ್.ಎನ್.ಎಲ್ ವತಿಯಿಂದ ಪಡೆಯಲಾಗುತ್ತಿರುತ್ತದೆ. ಈ ಸೌಲಭ್ಯಕ್ಕೆ ಅನುಗುಣವಾಗಿ ವಿವಿ ನಿಲಯದ ಆವರಣದಲ್ಲಿರುವ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಸಂಪರ್ಕದ ಅವಶ್ಯಕತೆ ಇರುತ್ತದೆ ಹಾಗೂ ವಿದ್ಯಾರ್ಥಿಗಳು, ವಿವಿ ನಿಲಯದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ವಿವಿ ಆವರಣದಲ್ಲಿ ICT Initiative ಗಳನ್ನು ಉಪಯೋಗಿಸಿಕೊಳ್ಳಲು Wi-fi ಸೌಲಭ್ಯದ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ನಿರ್ದೇಶನದಂತೆ ನುರಿತ ಸಂಸ್ಥೆಯವರು ಸ್ಥಳ ವೀಕ್ಷಣೆ ನಡೆಸಿ, ಈ ಕಾರ್ಯಕ್ಕೆ ಅಂದಾಜು ಮೊತ್ತ ರೂ.5,95,00,000/- (ರೂ. ಐದು ಕೋಟಿ ತೊಂಭತ್ತೈದು ಲಕ್ಷ ಮಾತ್ರ) ತಗಲುತ್ತದೆ ಎಂದು ತಿಳಿಸಿರುತ್ತಾರೆ.

(ಕುಲಪತಿಗಳು) ಕುಲಸಚಿವರು

ಈ ಹಿನ್ನೆಲೆಯಲ್ಲಿ ಕಟ್ಟಡಗಳಿಗೆ Internal Connectivity ಗೆ Optical Fiber Cable (OFC) ಅಳವಡಿಸಿ Wi-fi ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು ನಿಯಮಾನುಸಾರ ಕೈಗೊಳ್ಳುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಿದೆ.

ತೀರ್ಮಾನ :

ವಿಷಯವನ್ನು ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಪೂರ್ಣ ಕ್ಯಾಂಪಸ್‌ಗೆ Wi-fi ಸೌಲಭ್ಯದ ಅವಶ್ಯಕತೆ ಇರುವುದನ್ನು ಮನಗಂಡ ಮಾನ್ಯ ಸದಸ್ಯರುಗಳು ಸದರಿ ಕಾರ್ಯವನ್ನು Keonics ಮೂಲಕ ಕಾರ್ಯಗತಗೊಳಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

* * * * * * *

ವಿಷಯ ಸಂಖ್ಯೆ : 165.10

ವಿಷಯ : ಶ್ರೀ ಹೆಚ್.ಜೆ. ರವಿಕುಮಾರ್, ಹಿರಿಯ ಸಹಾಯಕ(ಅಮಾನತ್ತು), ಕರಾಮುವಿ ಪ್ರಾದೇಶಿಕ ಕೇಂದ್ರ, ಕಾರವಾರ, ಇವರ ವಿರುದ್ಧ ಇಲಾಖಾ ವಿಚಾರಣೆಯ ಅಂತಿಮ ವರದಿ ಸಲ್ಲಿಸಿರುವ ಕುರಿತು.

* * * * * *

ಶ್ರೀ ಹೆಚ್.ಜೆ. ರವಿಕುಮಾರ್, ಹಿರಿಯ ಸಹಾಯಕ (ಅಮಾನತ್ತು), ಕರಾಮುವಿ ಪ್ರಾದೇಶಿಕ ಕೇಂದ್ರ, ಕಾರವಾರ, ಇವರ ವಿರುದ್ಧ ಕಚೇರಿ ಗೈರು ಹಾಜರಿ ಸಂಬಂಧ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ವೆಂಕಟೇಶ್.ಆರ್, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದ್ದು, ಅವರು ಇಲಾಖಾ ವಿಚಾರಣೆ ನಡೆಸಿ ಅಂತಿಮ ವರದಿಯನ್ನು ದಿನಾಂಕ:16.03.2021 ರಂದು ವಿ.ವಿ.ನಿಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ವರದಿಯನ್ನು ವಿ.ವಿ.ನಿಲಯದ ಶಿಸ್ತು ಪ್ರಾಧಿಕಾರವಾದ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕಾಗಿ ಮಂಡಿಸಿದೆ.

* * * * * * *

ತೀರ್ಮಾನ :

ವಿಚಾರಣಾಧಿಕಾರಿಗಳ ವರದಿ ಹಾಗೂ ವಿ.ವಿ.ನಿಲಯವು ಅಳವಡಿಸಿಕೊಂಡಿರುವ ಸೇವಾ ಪರಿನಿಯಮಗಳನುಸಾರ ಕ್ರಮ ಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

* * * * * * *

ವಿಷಯ ಸಂಖ್ಯೆ : 165.11

ವಿಷಯ : ಶ್ರೀ ಸುರೇಶ ಎಸ್, ಪ್ರ.ದ.ಗು, ಹಣಕಾಸು ವಿಭಾಗ ಕರಾಮುವಿ ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಕುರಿತು.

* * * * *

ಶ್ರೀ ಸುರೇಶ ಎಸ್, ಪ್ರ.ದ.ಗು, ಹಣಕಾಸು ವಿಭಾಗ ಕರಾಮುವಿ ಇವರು ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಯಾಗಿದ್ದು, ಇವರು Covid -19 Positive ದೃಢಪಟ್ಟ ಹಿನ್ನೆಲೆಯಲ್ಲಿ ಮೈಸೂರಿನ ಪ್ರಲಾಕ್ಷ ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದಿದ್ದು, ರೂ 4,06,906/- ಗಳ ವೈದ್ಯಕೀಯ ವೆಚ್ಚದ ಹುಂಡಿಯನ್ನು ಮರುಭರಿಕೆಗಾಗಿ ಸಲ್ಲಿಸಿರುತ್ತಾರೆ.

ಈ ಹುಂಡಿಯನ್ನು ಕೋವಿಡ್ -19 ಸರ್ಕಾರದ ಆದೇಶ ಸಂಖ್ಯೆ ಆಕುಕ 240 ಸಿಜಿಇ 2020 ದಿನಾಂಕ: 02-02-2021 ರನ್ವಯ ಪರಿಶೀಲಿಸಿ ರೂ:2,89,800/- ಗಳನ್ನು ಪಾವತಿಗೆ

ಕುಲಪತಿಗಳು



ಕುಲಸಚಿವರು

ಅಂಗೀಕರಿಸಬಹುದಾದ ಮೊತ್ತವಾಗಿದ್ದು, ಸದರಿಯವರ ವೈದ್ಯಕೀಯ ವೆಚ್ಚವು 1.00 ಲಕ್ಷ ಮೀರಿರುವುದರಿಂದ, ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ Satute relating to Adoption "The Karnataka Government Servants (Medical Attendance) Rules, 1963 to the Employees of KSOU" ಪರಿನಿಯಮದ ಕ್ಲಾಸ್ (3)ರ ಪ್ರಕಾರ ಒಬ್ಬ ನೌಕರರಿಗೆ ಒಂದು ವರ್ಷದಲ್ಲಿ ಮರುಭರಿಕೆಯ ವೆಚ್ಚವು ಗರಿಷ್ಠ ಮಿತಿಯು ಒಂದು ಲಕ್ಷ ಮೀರಬಾರದೆಂದಿರುತ್ತದೆ. ಸದರಿ ನಿಯಮಗಳನ್ನು ಕಾರ್ಯಗತಗೊಳಿಸುವಲ್ಲಿ ಸಂದೇಹ, ಕ್ಲಿಷ್ಟವಾದಲ್ಲಿ ಪರಿನಿಯಮದ ಕ್ಲಾಸ್ (5)ರ ಪ್ರಕಾರ ವ್ಯವಸ್ಥಾಪನಾ ಮಂಡಳಿಯ ಮುಂದೆ ಮಂಡಿಸಿ ಬಗೆಹರಿಸಿಕೊಳ್ಳಬಹುದಾಗಿದೆ ಎಂದಿರುತ್ತದೆ. (ಪರಿನಿಯಮದ ಪ್ರತಿ ಲಗತ್ತಿಸಿದೆ)

ಸದರಿ ನೌಕರರು ರೂ:2,89,800/- ವ್ಯಯಿಸಿರುವ ವೈದ್ಯಕೀಯ ವೆಚ್ಚವನ್ನು ನಿಯಮಗಳಡಿಯಲ್ಲಿ ಮರುಭರಿಕೆ ಮಾಡುವ ಸಂಬಂಧದಲ್ಲಿ ವ್ಯವಸ್ಥಾಪನಾ ಮಂಡಳಿಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

* * * * * * *

ತೀರ್ಮಾನ :

ವಿಷಯವನ್ನು ಚರ್ಚಿಸಿದ ಸಭೆಯು, ವಿ.ವಿ.ನಿಲಯವು ಅಳವಡಿಸಿಕೊಂಡಿರುವ ಪರಿನಿಯಮಗಳನ್ವಯ ವೈದ್ಯಕೀಯ ವೆಚ್ಚವನ್ನು ಭರಿಸುವಂತೆ ಸಭೆಯು ಒಪ್ಪಿಗೆ ನೀಡಿತು. ಮುಂದುವರೆದು, ತಡವಾಗಿ ಅರ್ಜಿ ಸಲ್ಲಿಸಿದ ಶ್ರೀ ಗುರು ಮಂಜುನಾಥರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಅರ್ಹತಾ ಮೊತ್ತವನ್ನು ಪಾವತಿಸಲು ಸಮ್ಮತಿಸಿತು.

* * * * * * *

ವಿಷಯ ಸಂಖ್ಯೆ : 165.12

ವಿಷಯ : 17ನೇ ವಿಶೇಷ ಶೈಕ್ಷಣಿಕ ಮಂಡಳ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.

* * * * * * *

ದಿನಾಂಕ: 25.06.2021ರಂದು ನಡೆದ 17ನೇ ಶೈಕ್ಷಣಿಕ ಮಂಡಳ ಸಭೆಯ ನಡವಳಿಯನ್ನು ಮುಂಬರುವ 165ನೇ ವ್ಯವಸ್ಥಾಪನಾ ಮಂಡಳ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

ತೀರ್ಮಾನ :

17ನೇ ಶೈಕ್ಷಣಿಕ ಮಂಡಳ ಸಭೆಯ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಷಯ ಸಂಖ್ಯೆ : 17.03, 17.06, 17.07, 17.10, 17.14 ಮತ್ತು 17.15ರ ವಿಷಯಗಳಿಗೆ ಸಂಬಂಧಪಟ್ಟ ಪರಿನಿಯಮಗಳು/ಅಧ್ಯಾದೇಶಗಳನ್ನು ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಲು ವ್ಯವಸ್ಥಾಪನಾ ಮಂಡಳ ಸಭೆಯು ಅನುಮೋದನೆ ನೀಡಿತು ಹಾಗೂ

ವಿಷಯ ಸಂಖ್ಯೆ : 17.18ರ ವಿಷಯ ಕುರಿತು ಪೂರ್ಣ ಮಾಹಿತಿಯನ್ನು ಒದಗಿಸುವಂತೆ ಹಾಗೂ ಯು.ಜಿ.ಸಿ.ಯ ನಿಯಮಾವಳಿಗಳನುಸಾರ ಕ್ರಮ ವಹಿಸುವಂತೆ ಸಭೆಯು ನಿರ್ಣಯಿಸಿತು. ಉಳಿದಂತೆ ಎಲ್ಲ ವಿಷಯಗಳನ್ನು ಶಿಕ್ಷಣ ಮಂಡಳ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಲು ಅನುಮೋದಿಸಿತು.

* * * * * * *

ಕುಲಪತಿಗಳು



ಕುಲಸಚಿವರು

**<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ಇನ್ನಿತರೆ ವಿಷಯಗಳು :</u>**

1. ರೇಡಿಯೋ ಕಾರ್ಯಕ್ರಮ ನಿರ್ವಹಣೆ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವ ಕರಾಮುವಿಯ ಅಧ್ಯಾಪಕರುಗಳಿಗೆ, ಅವರು ನಿರ್ವಹಿಸುತ್ತಿರುವ ಕಾರ್ಯಭಾರದಲ್ಲಿ ನಿಗದಿಪಡಿಸಿರುವ ಸಂಖ್ಯೆಗೂ ಹೆಚ್ಚಾಗಿ ರೇಡಿಯೋ ಕಾರ್ಯಕ್ರಮ ನೀಡುವ ಅಧ್ಯಾಪಕರುಗಳಿಗೆ ಪ್ರತಿ ಕಾರ್ಯಕ್ರಮಕ್ಕೆ ರೂ.750/- ಗಳ ಸಂಭಾವನೆಯನ್ನು ನಿಗದಿಪಡಿಸುವ ಸಂಬಂಧ ಸಭೆಯ ಒಪ್ಪಿಗೆ ಕೋರಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

2. ಪ್ರವೇಶಾತಿಯಿಂದ ಪ್ರಾರಂಭಗೊಂಡು, ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವವರೆಗೆ ಕಿಯೋನಿಕ್ಸ್ ಸಂಸ್ಥೆಯವರು ಅಭಿವೃದ್ಧಿಪಡಿಸಿದ ತಂತ್ರಾಂಶವನ್ನು ಯಾವುದೇ ಖರ್ಚು-ವೆಚ್ಚವಿಲ್ಲದೇ (Free of Cost) 2019 ರಿಂದ 2020 ಮಾರ್ಚ್‌ವರೆಗೆ ಉಪಯೋಗಿಸಿಕೊಂಡು, ಕೋವಿಡ್ – 19 ರ ಪ್ರಯುಕ್ತ 2021ರ ಮಾರ್ಚ್‌ವರೆಗೆ ಸೇವೆಯನ್ನು ನೀಡಿರುತ್ತಾರೆ. ಈ ತಂತ್ರಾಂಶವು ವಿ.ವಿ.ನಿಲಯಕ್ಕೆ ಬಹಳ ಪರಿಣಾಮಕಾರಿಯಾಗಿರುವುದರಿಂದ ತಂತ್ರಾಂಶದ ತಾಂತ್ರಿಕ ಬೆಂಬಲವನ್ನು ಅವರಲ್ಲೇ ಮುಂದುವರೆಸುವ ಬಗ್ಗೆ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸಭೆಯು, ಸಂಸ್ಥೆಯೊಂದಿಗೆ ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಕುಲಪತಿಗಳಿಗೆ ಸೂಚಿಸಿತು.

3. ಡಾ. ಎನ್. ಲಕ್ಷ್ಮಿ, ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರಿಗೆ ಸಿ.ಎ.ಎಸ್. ಅಡಿಯಲ್ಲಿ ಇತ್ತೀಚೆಗೆ ಪದೋನ್ನತಿ ನೀಡಿರುವ ಸಂಬಂಧ ತಮಗೆ ನಿಗದಿಪಡಿಸಿರುವ ದಿನಾಂಕದಲ್ಲಿ ತೃಪ್ತಿಯಿಲ್ಲದ ಕಾರಣ ಅರ್ಜಿ ಸಲ್ಲಿಸಿ, ಸರಿಪಡಿಸಲು ಕೋರಿರುವುದಾಗಿ ತಿಳಿಸಿದರು. ಇದಕ್ಕೆ ಮಾನ್ಯ ಸದಸ್ಯರುಗಳು ಪರಿಶೀಲನಾ ಸಮಿತಿ ರಚಿಸಿ, ಈ ತರಹದ anamoly ಇರುವ ಇನ್ನಿತರೆ ಅಧ್ಯಾಪಕರ ಅಹವಾಲುಗಳನ್ನು ಪರಿಶೀಲಿಸಿ, ವರದಿ ಪಡೆದುಕೊಂಡು ಕ್ರಮವಹಿಸಲು ಮಾನ್ಯ ಕುಲಪತಿಗಳಿಗೆ ಸೂಚಿಸಿದರು.

4. ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಮಾತನಾಡಿ ಬ್ರಹ್ಮಕುಮಾರಿ ಸಮಾಜ ಪೀಠವು ಒಡಂಬಡಿಕೆ ರೀತ್ಯ ಈ ಹಿಂದೆ ವಿಶ್ವವಿದ್ಯಾನಿಲಯಕ್ಕೆ ನೀಡಿರುವ ಮೊತ್ತವನ್ನು ವಾಪಸ್ಸು ನೀಡುವ ಕುರಿತು ಪ್ರಸ್ತಾಪಿಸಿದರು. ಇದಕ್ಕೆ ಉತ್ತರವಾಗಿ, ಮಾನ್ಯ ಕುಲಪತಿಗಳು ಇದು ನಾನ್-ರೀಫಂಡಬಲ್ ಮೊತ್ತವಾಗಿದ್ದು, ವಿ.ವಿ.ನಿಲಯವು ಈ ಹಿಂದೆ ಅನೇಕ ಸಂಸ್ಥೆಗಳೊಂದಿಗೆ ಒಡಬಂಡಿಕೆ ಮಾಡಿಕೊಂಡಿದ್ದು, ಎಲ್ಲರಿಗೂ ರೀಫಂಡ್ ಮಾಡಬೇಕಾದ ಅನಿವಾರ್ಯತೆ ಉಂಟಾಗುತ್ತದೆ ತಿಳಿಸಿದರು.

5. ಮಾನ್ಯ ಸದಸ್ಯರಾದ ಪ್ರೊ. ಯಶಸ್ವಿನಿ.ಎಸ್. ಇವರು ಮಾತನಾಡಿ, ವಿ.ವಿ.ನಿಲಯದಲ್ಲಿ ಕೋವಿಡ್ – 19 ಕಾಯಿಲೆಯಿಂದ ಮರಣ ಹೊಂದಿದ ಸಿಬ್ಬಂದಿಗಳಿಗೆ ವಿ.ವಿ.ನಿಲಯದ ವತಿಯಿಂದ ಮರಣ ಹೊಂದಿದ ಕುಟುಂಬದ ಅವಲಂಬಿತರಿಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 165ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು